ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

24

ಇಲಾಖೆ / ವಿಷಯ : DEPARTMENT / SUBJECT: ಸಂಸತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ     ದಿನಾಂಕ : DATE : 26/8/2020

# ಸೆ.14ರಿಂದ ಸಂಸತ್ ಅಧಿವೇಶನ ಆರಂಭ

## ಸಾಮಾಜಿಕ ಅಂತರ ಕಾಪಾಡಿಕೊಂಡು ಆಸನ

## ಸಂಸದೀಯ ಸಂಪುಟ ಸಮಿತಿಯ ಶಿಫಾರಸು

**ನವದೆಹಲಿ:** ಸಂಸತ್ತಿನ ಮುಂಗಾರು ಅಧಿವೇಶನವನ್ನು ಸೆಪ್ಟೆಂಬರ್ 14ರಿಂದ ಅಕ್ಟೋಬರ್ 1ರವರೆಗೆ ನಡೆಸಲು ಸಂಸದೀಯ ವ್ಯವಹಾರಗಳ ಸಂಪುಟ ಸಮಿತಿ ಶಿಫಾರಸು ಮಾಡಿದೆ ಎಂದು ಮೂಲಗಳು ತಿಳಿಸಿವೆ. ಅಧಿವೇಶನದಲ್ಲಿ 18 ದಿನಗಳ ಕಲಾಪ ನಡೆಸಲು ತೀರ್ಮಾನಿಸಲಾಗಿದೆ. ಕೊರೋನಾ ವೈರಸ್ ಭೀತಿಯ ನಡುವೆ ಮೊದಲ ಬಾರಿ ಪೂರ್ಣ ಪ್ರಮಾಣದ ಅಧಿವೇಶನ ನಡೆಯುತ್ತಿದ್ದು, ಇದೇ ಮೊದಲ ಬಾರಿಗೆ ಸಾಮಾಜಿಕಅಂತರಕಾಯ್ದುಕೊಂಡು ಕಲಾಪ ನಡೆಸಲು ತೀರ್ಮಾನಿಸಲಾಗಿದೆ. ಕಳೆದ ಅಧಿವೇಶನದ ಸಂದರ್ಭದಲ್ಲಿ ಕೊರೋನ ವೈರಸ್ ಹಾವಳಿ ಆರಂಭಗೊಂಡಿತ್ತು. ಹೀಗಾಗಿ ಕಲಾಪವನ್ನು ಅರ್ಧಕ್ಕೇ ಮಾ.23ರಂದು ಮೊಟಕುಗೊಳಿಸಲಾಗಿತ್ತು.



### ಕಲಾಪ ಹೀಗಿರಲಿದೆ...

- ರಾಜ್ಯಸಭೆ, ಲೋಕಸಭೆ ಸದಸ್ಯರು ಕಲಾಪ ನಡೆಯುವ ಸ್ಥಳ, ಚೇಂಬರ್ ಹಾಗೂ ಗ್ಯಾಲರಿಗಳಲ್ಲಿ ಆಸೀನರಾಗಲಿದ್ದಾರೆ.
- ಸಾಮಾಜಿಕ ಅಂತರಕ್ಕಾಗಿ ಮೇಲಿನ ಕ್ರಮ
- ರಾಜ್ಯಸಭೆಯ 60 ಸದಸ್ಯರಿಗೆ ಚೇಂಬರ್‌ನಲ್ಲಿ, 51 ಸದಸ್ಯರಿಗೆ ಗ್ಯಾಲರಿಯಲ್ಲಿ ಹಾಗೂ 132 ಸದಸ್ಯರಿಗೆ ಲೋಕಸಭೆ ಚೇಂಬರ್‌ನಲ್ಲಿ ವ್ಯವಸ್ಥೆ
- ಲೋಕಸಭೆ ಸದಸ್ಯರಿಗೂ ಇದೇ ಮಾದರಿಯ ಆಸನ ವ್ಯವಸ್ಥೆ ಇರುತ್ತದೆ.
- ಯಾವುದೇ ಅಡಚಣೆಯಿಲ್ಲದೆ ಕಲಾಪದ ವೀಕ್ಷಣೆಗೆ ದೊಡ್ಡ ಡಿಸ್ಪ್ಲೇ ಸ್ಕ್ರೀನ್‌ಗಳ ಅಳವಡಿಕೆ